ರಾಜನಿಗೆ ಆಶ್ಚರ್ಯವಾಯಿತು. ಆ ಸನ್ಯಾಸಿನಿಯ ಬಗ್ಗೆ ಗೌರವ ಮೂಡಿತು. ಒಬ್ಬ ರಾಜ ಮಾಡಬೇಕಾದ ಕೆಲಸವನ್ನು ಒಬ್ಬ ಸನ್ಯಾಸಿನಿ ಮಾಡುತ್ತಿರುವುದನ್ನು ಕೇಳಿ ಸಂತೋಷಗೊಂಡ. ಬೌದ್ಧ ಸನ್ಯಾಸಿನಿಯನ್ನು ಕಂಡು, ಆಕೆಗೆ ಗೌರವದಿಂದ ವಂದಿಸಬೇಕೆಂದುಕೊಂಡ. ಕುದುರೆಯಿಂದಿಳಿದು ತಾನೇ ಖುದ್ದಾಗಿ ಬೌದ್ಧ ವಿಹಾರದೊಳಗೆ ನಡೆದ. ದಂಡಾಧಿಕಾರಿ, ಪಂಡಿತ ಮತ್ತು ಕೆಲವು ಭಟರು ರಾಜನನ್ನು ಹಿಂಬಾಲಿಸಿದರು.

ವಿಹಾರದ ತುಂಬೆಲ್ಲಾ ಜನ. ಮಣಿಮೇಕಲೆ, ತನ್ನ ಕೈಯಲ್ಲಿದ್ದ 'ಅಮೃತ ಸುರಭಿ' ಅಕ್ಷಯ ಪಾತ್ರೆಯಿಂದ ಎಲ್ಲರಿಗೂ ಅನ್ನ ಬಡಿಸುತ್ತಿದ್ದಳು. ಮಾಧವಿ ಮತ್ತು ಸುಧಾಮತಿ ಎಲ್ಲರಿಗೂ ನೀರು ಕೊಡುತ್ತಿದ್ದರೆ, ಇತರ ಬಿಕ್ಕುಗಳು ಆವರಣವನ್ನು ಶುಚಿಗೊಳಿಸುತ್ತಿದ್ದರು. ಅಷ್ಟೊಂದು ಜನರಿದ್ದರೂ ವಿಹಾರದಲ್ಲಿ ಯಾವುದೇ ಗದ್ದಲ, ಗಡಿಬಿಡಿ, ಅವಸರ ಇರಲಿಲ್ಲ. ಎಲ್ಲರಲ್ಲೂ ನಿರಾಳಭಾವ. ಅಲ್ಲಿ ಅಚ್ಚುಕಟ್ಟುತನ ಎದ್ದುಕಾಣುತ್ತಿತ್ತು. ಅಲ್ಲಿಗೆ ಬಂದವರೆಲ್ಲರೂ ಮಣಿಮೇಕಲೆಗೆ ವಂದಿಸಿ ಹೋಗುತ್ತಿದ್ದರು. ಇವೆಲ್ಲವನ್ನೂ ಸೂಕ್ಷ್ಮವಾಗಿ ನೋಡುತ್ತಿದ್ದ ರಾಜ ಆಶ್ಚರ್ಯಗೊಂಡ. ತಾನೇ ಮಣಿಮೇಕಲೆಯ ಬಳಿಗೆ ಬಂದು ಆಕೆಗೆ ವಂದಿಸಿ, 'ಒಬ್ಬ ರಾಜ ತನ್ನ ಪ್ರಜೆಗಳಿಗೆ ಮಾಡಬೇಕಾದ ಕೆಲಸವನ್ನು ನೀವು ಮಾಡುತ್ತಿದ್ದೀರಿ! ನಿಮಗೆ ನಾನು ಋಣಿಯಾಗಿದ್ದೇನೆ. ಇದೆಲ್ಲಾ ಹೇಗೆ ಸಾಧ್ಯ? ಮತ್ತು ನೀವು ಯಾರು ಹೇಳಿ?' ಎಂದು ವಿನಯದಿಂದ ಕೇಳಿಕೊಂಡ.

ಮಣಿಮೇಕಲೆ ರಾಜನಿಗೆ ವಂದಿಸಿ, 'ನಾನು ಕನ್ನಗಿ ಮತ್ತು ಕೋವಲನ್ ಅವರ ಮಗಳು ಮಣಿಮೇಕಲೆ. ಗುರುಗಳಾದ ಅರವಣ ಅಡಿಗಳಿಂದ ಧರ್ಮೋಪದೇಶವನ್ನು ಕೇಳಿ, ಸರ್ವಜನರ ಹಿತವನ್ನು ಬಯಸುವ ಬೌದ್ಧ ಧಮ್ಮವನ್ನು ಸ್ವೀಕರಿಸಿದ್ದೇನೆ. ಮಣಿಪಲ್ಲವ ದ್ವೀಪದಲ್ಲಿ ಸಮುದ್ರ ದೇವತೆ ಮಣಿಮೇಕಲಾದೇವಿಯ ಮೂಲಕ ಗಂಧರ್ವ ಸ್ತ್ರೀಯರು ನನಗೆ ಈ ಅಕ್ಷಯ ಪಾತ್ರೆಯನ್ನು ನೀಡಿದರು. ಇದರಿಂದ ಹಸಿದವರಿಗೆ ಅನ್ನ ನೀಡುವ ಕೆಲಸ ಮಾಡುತ್ತಿದ್ದೇನೆ' ಎಂದು ಹೇಳಿದಳು.

'ಧರ್ಮ ಎಂದರೆ ಬರಿ ಅನ್ನ ನೀಡುವುದೇ?' ಎಂದು ರಾಜ ತುಸು ಉದಾಸೀನದಿಂದ ಕೇಳಿದ.

'ರಾಜನೇ, ಧರ್ಮವೆಂದರೆ ಮತ್ತೇನೂ ಅಲ್ಲ, ಹಸಿದವರಿಗೆ ಅನ್ನ ನೀಡುವುದೇ ಧರ್ಮ'

ಮಣಿಮೇಕಲೆಯ ಮಾತನ್ನು ಕೇಳಿ ರಾಜನ ಪಕ್ಕದಲ್ಲಿ ನಿಂತಿದ್ದ ಪಂಡಿತನಿಗೆ ಆಶ್ಚರ್ಯವಾಯಿತು! ಆದರೂ ಅದನ್ನು ತೋರಗೊಡದೆ 'ಮಗು, ಕೇವಲ ಅನ್ನವನ್ನು ಕೊಡುವುದು ಧರ್ಮವೇ? ನಮ್ಮ ಶಾಸ್ತ್ರ ಗ್ರಂಥಗಳಲ್ಲಿ ಇದೆಲ್ಲಾ ಇಲ್ಲ! ನೀನಿನ್ನೂ ಚಿಕ್ಕವಳು. ನಿನಗೆ ಧರ್ಮ ಸೂಕ್ಷ್ಮಗಳೆಲ್ಲಾ ತಿಳಿಯದು' ಎಂದು ನಿಕೃಷ್ಟ ಧ್ವನಿಯಲ್ಲಿ ಹೇಳಿದ.

ಪಂಡಿತನ ಮಾತುಗಳನ್ನು ಶಾಂತಚಿತ್ತದಿಂದ ಕೇಳಿದ ಮಣಿಮೇಕಲೆ, 'ಹಿರಿಯರೆ, ಬಡವರ ಬಳಿಗೆ ಬರದ ಜ್ಞಾನ ಮತ್ತು ತರ್ಕಗಳಿಂದ ಯಾವ ಪ್ರಯೋಜನವೂ ಇಲ್ಲ. ಕರುಣೆ ಮತ್ತು ಪ್ರೀತಿ ಎಲ್ಲ ಜ್ಞಾನಕ್ಕಿಂತ ಮಿಗಿಲು. ಹಸಿದವರಿಗೆ ಅನ್ನ ನೀಡುವುದಕ್ಕಿಂತ ಧರ್ಮ ಕಾರ್ಯ ಜಗತ್ತಿನಲ್ಲಿ ಯಾವುದಿದೆ! ಎಂದು ಧೃಡಚಿತ್ತದಿಂದ ಹೇಳಿದಳು.

ಮಣಿಮೇಖಲೆ ಮಾತಿನಿಂದ ತುಸು ಮೃದುವಾದ ರಾಜ ಪಂಡಿತನಿಗೆ 'ಸುಮ್ಮನಿರಿ' ಎಂದು ಕಣ್ಸನ್ನೆಯಲ್ಲೇ ಹೇಳಿ, 'ಹಾಗಾದರೆ ನೀನೂ ಮತ್ತು ನಿನ್ನ ಬಳಗದವರು ನಗರಕ್ಕೆ ಬನ್ನಿ. ಅಲ್ಲಿಯೇ ನಿಮಗೊಂದು ವಿಹಾರವನ್ನು ಕಟ್ಟಿಸಿಕೊಡುತ್ತೇನೆ. ಅಲ್ಲಿಯೇ ಬಡವರಿಗೆ ಅನ್ನದಾನ ಮಾಡುತ್ತಾ ಇದ್ದುಬಿಡಿ' ಎಂದ ಮಣಿಮೇಕಲೆಗೆ ಹೇಳಿದ.

'ರಾಜನೇ, ನಾವು ಎಲ್ಲವನ್ನೂ ತ್ಯಜಿಸಿದವರು. ಆದರೆ ನೀನು ಹಾಗಲ್ಲ! ರಾಜ್ಯವೇ ನಿನ್ನ ಕುಟುಂಬ. ನೀನು ನಿನ್ನ ಕುಟುಂಬಕ್ಕೆ ಉತ್ತರದಾಯಿಯಾಗಿರು. ಜನ ಬಡವರಾಗಿರುವುದು ಪಾಪವಲ್ಲ, ಆದರೆ ಅವರನ್ನು ಅನಾದರದಿಂದ ಕಾಣುವುದು ಮಾತ್ರ ಪಾಪ. ಜನ ಬಡವರಾಗುವುದು ಕೆಲವು ಸಲ ಪ್ರಕೃತಿಯ ವಿಕೋಪದಿಂದ. ಇನ್ನೂ ಕೆಲವು ಸಲ ಕೆಟ್ಟ ಆಡಳಿತದಿಂದ. ಇದು ನಿನಗೆ ಅರ್ಥವಾದರೆ ಉಳಿದಿದ್ದೆಲ್ಲವೂ ಅರ್ಥವಾಗುತ್ತದೆ'

ರಾಜನಿಗೆ ಮಣಿಮೇಕಲೆಯ ಮಾತುಗಳಿಂದ ಹೆಚ್ಚು ಸಂಕೋಚವಾಯಿತು. ತಾನು ಇದುವರೆಗೆ ತಿಳಿದಿದ್ದ ಧರ್ಮವೇ ಬೇರೆ, ಆದರೆ ಮಣಿಮೇಕಲೆ ಹೇಳುತ್ತಿರುವ ಧರ್ಮವೇ ಬೇರೆ ಎಂದುಕೊಂಡ. ಆದರೂ ಮಣಿಮೇಕಲೆ ಹೇಳಿದ '....ಹಸಿದವರಿಗೆ ಅನ್ನ